ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSA
Website: https://himshassan.karnataka.gov.in/ Phone/Fax No.08172-231699, 231599, Email:directorhims@yahoo.com

# ವಿಶೇಷ ಸಾಮಾನ್ಯ ಸಭೆಯ ಸಭಾ ನಡವಳಿಗಳು

ದಿನಾಂಕ:27-09-2023 ಬುಧವಾರ, ಅಪರಾಹ್ನ: 2.30 ಗಂಟೆಗೆ ಸನ್ಮಾನ್ಯ ಡಾ.ಶರಣ ಪ್ರಕಾಶ್ ಪಾಟೀಲ್, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಸಭೆ ಹಿಮ್ಸ್, ಹಾಸನ ಇವರ ಘನ ಅಧ್ಯಕ್ಷತೆಯಲ್ಲಿ ವಿಕಾಸ ಸೌಧ, ಬೆಂಗಳೂರುನಲ್ಲಿ ನಡೆದ ವಿಶೇಷ ಸಾಮಾನ್ಯ ಸಭೆಯ ಸಭಾ ನಡವಳಿಗಳು.

ಒಟ್ಟು ಸದಸ್ಯರ ಸಂಖ್ಯೆ: 11 ಹಾಜರಿದ್ದ ಸದಸ್ಯರ ಸಂಖ್ಯೆ: 07

| | | | |
|---|---|---|---|
| 01 | ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು,<br>ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ | ಅಧ್ಯಕ್ಷರು | ಹಾಜರಿರುತ್ತಾರೆ |
| 02 | ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು,<br>ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ,<br>ಅಂಬೇಡ್ಕರ್ ವಿಧಿ, 6ನೇ ಮಹಡಿ, 4ನೇ ಗೇಟ್, ಬೆಂಗಳೂರು. | ಉಪಾಧ್ಯಕ್ಷರು | ಹಾಜರಿರುತ್ತಾರೆ |
| 03 | ಮಾನ್ಯ ಉಪಕುಲಪತಿಗಳು,<br>ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ,<br>ಕರ್ನಾಟಕ, ಜಯನಗರ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 04 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |

ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | | |
|---|---|---|---|
| 05 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ, ವಿಕಾಸ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 06 | ಮಾನ್ಯ ನಿರ್ದೇಶಕರು,<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,<br>ಕರ್ನಾಟಕ ಸರ್ಕಾರ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಆವರಣ ಹಳೆ ಕಟ್ಟಡ, ಕೆ.ಆರ್. ಮಾರ್ಕೆಟ್ ರಸ್ತೆ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 07 | ಮಾನ್ಯ ಜಿಲ್ಲಾಧಿಕಾರಿಗಳು,<br>ಹಾಸನ ಜಿಲ್ಲೆ, ಹಾಸನ. | ಸದಸ್ಯರು | -- |
| 08 | ಸರ್ಕಾರದಿಂದ ನಾಮನಿರ್ದೇಶಿಸಲಾದ ವೈದ್ಯಕೀಯ ಕ್ಷೇತ್ರದಲ್ಲಿ ತಜ್ಞತೆಯನ್ನು ಹೊಂದಿರುವ ಓರ್ವ ವ್ಯಕ್ತಿ | ಸರ್ಕಾರದಿಂದ ನಾಮನಿರ್ದೇಶನವಾಗಿರುವುದಿಲ್ಲ | -- |
| 09 | ಸರ್ಕಾರದಿಂದ ನಾಮನಿರ್ದೇಶಿಸಲಾದ ಓರ್ವ ಅಸಾಧಾರಣ ಸಾಮಾಜಿಕ ಕಾರ್ಯಕರ್ತ | ಸರ್ಕಾರದಿಂದ ನಾಮನಿರ್ದೇಶನವಾಗಿರುವುದಿಲ್ಲ | -- |
| 10 | ಸರ್ಕಾರದಿಂದ ನಾಮನಿರ್ದೇಶಿಸಲಾದ ಮಾನ್ಯತೆ ಪಡೆದ ಸರ್ಕಾರೇತರ ಸಂಸ್ಥೆಯ ಓರ್ವ ಅಸಾಧಾರಣ ಜ್ಞಾನವುಳ್ಳ ಮಹಿಳೆ | ಸರ್ಕಾರದಿಂದ ನಾಮನಿರ್ದೇಶನವಾಗಿರುವುದಿಲ್ಲ | -- |
| 11 | ಮಾನ್ಯ ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 01 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಎಮ್.ಒ.ಎ. ತಿದ್ದುಪಡಿ ಮಾಡುವ ಬಗ್ಗೆ. | ಸರ್ಕಾರದ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ. |
| 02 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೈಲಾ ತಿದ್ದುಪಡಿ ಮಾಡುವ ಬಗ್ಗೆ. | ಸರ್ಕಾರದ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ. |
| 03 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಗ್ರೂಪ್ ಎ ವೃಂದದ ಸಿ&ಆರ್ ತಿದ್ದುಪಡಿ ಮಾಡುವ ಬಗ್ಗೆ. | ಸರ್ಕಾರದ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ. |
| 04 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಗ್ರೂಪ್ ಬಿ, ಸಿ, ಡಿ, ವೃಂದದ ಹುದ್ದೆಗಳಿಗೆ ಸಂಬಂಧಿಸಿದಂತೆ ಸಿದ್ದಪಡಿಸಿರುವ ಸಿ &ಆರ್ ಕರಡು ಪ್ರತಿಯ ಬಗ್ಗೆ. | ಸರ್ಕಾರದ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ. |



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | |
|---|---|---|
| 05 | ಸಂಸ್ಥೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ವರ್ಗಾವಣೆ ಕೋರಿ ನಿರಾಕ್ಷೇಪಣಾ ಪತ್ರ ನೀಡುವಂತೆ ಸಲ್ಲಿಸಿರುವ ಮನವಿ ಪತ್ರಗಳ ಬಗ್ಗೆ. | ಹಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿವರ್ಗದವರು ವೈಯಕ್ತಿಕ ಕಾರಣಗಳ ಹಿನ್ನೆಲೆಯಲ್ಲಿ ವರ್ಗಾವಣೆ ಹೊಂದುವ ಸಲುವಾಗಿ ಸಂಸ್ಥೆಯಿಂದ ನಿರಾಕ್ಷೇಪಣಾ ಪತ್ರ ಪಡೆಯಲು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಸದರಿ ಸಿಬ್ಬಂದಿಗಳಿಗೆ ನಿರಾಕ್ಷೇಪಣಾ ಪತ್ರ ನೀಡುವುದರ ಬಗ್ಗೆ ಸಂಸ್ಥೆಯ ಹಂತದಲ್ಲಿ ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಸರ್ಕಾರದಿಂದ ಹಲವಾರು ನಿರ್ದೇಶನದ ಪತ್ರಗಳು ಸ್ವೀಕೃತವಾಗಿರುತ್ತದೆ. ಇದಲ್ಲದೆ ವಿವಿಧ ವೃಂದದ ಕಾರ್ಯನಿರತ ಸಿಬ್ಬಂದಿಗಳು ಸಹ ಸಂಸ್ಥೆಯ ಮುಖ್ಯಸ್ಥರಿಗೆ ನೇರವಾಗಿ ಮನವಿ ಸಲ್ಲಿಸಿ ವರ್ಗಾವಣೆ ಹೊಂದಲು ನಿರಾಕ್ಷೇಪಣಾ ಪತ್ರ ನೀಡುವಂತೆ ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ.<br>ಮುಂದುವರೆದು, ದಿನಾಂಕ:31-08-2023ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಎಲ್ಲಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳ ಸಭೆಯಲ್ಲಿ ಸದರಿ ವಿಷಯವು ಪ್ರಸ್ತಾಪವಾಗಿದ್ದು, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ, ಇವರ ನಿರ್ದೇಶನದಂತೆ ಗ್ರೂಪ್ 'ಸಿ' ಸಿಬ್ಬಂದಿಗಳಿಗೆ ನಿರಾಕ್ಷೇಪಣಾ ಪತ್ರವನ್ನು ನೀಡುವಂತೆ ಮತ್ತು ಖಾಲಿಯಾದ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಬಹುದೆಂದು ಸೂಚಿಸಿರುವ ವಿಷಯವನ್ನು ಹಿಮ್ಸ್ ಸಂಸ್ಥೆಯ ನಿರ್ದೇಶಕರು ಸಭೆಯ ಅವಗಹನೆಗೆ ತರುತ್ತಾ 2009-10ರಲ್ಲಿ ಸಂಸ್ಥೆಗೆ ಖಾಯಂ ಆಗಿ ನೇಮಕಗೊಂಡ 307 ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಪ್ರಕರಣವು ಘನ ಉಚ್ಚ ನ್ಯಾಯಾಲಯದಿಂದ ಇತ್ಯಾರ್ಥವಾಗಲು ಸುಮಾರು 10 ವರ್ಷ ಕಾಲಾವಕಾಶ ತೆಗೆದುಕೊಂಡ ಹಿನ್ನೆಲೆಯಲ್ಲಿ ವರ್ಗವಣೆ ಹೊಂದಲು ಸಿದ್ಧರಿದ್ದ ನೌಕರರು ಈ ಸಂಸ್ಥೆಯಿಂದ ವರ್ಗಾವಣೆ ಹೊಂದಲು ಸಾಧ್ಯವಾಗಿರುವುದಿಲ್ಲ. ಇದೀಗ ನ್ಯಾಯಾಲಯದಿಂದ ಸದರಿ ಪ್ರಕರಣವು ಮುಕ್ತಾಯಗೊಂಡಿದ್ದು ನೇಮಕಗೊಂಡಿರುವ ಎಲ್ಲಾ ನೌಕರರ ಪ್ರೊಬೇಷನರಿ ಡಿಕ್ಲೇನರ್ ಆಗಿರುವುದರಿಂದ ಏಕ ಕಾಲದಲ್ಲಿ ಪ್ರಸ್ತುತ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಕಳೆದ 10 ವರ್ಷಗಳಿಂದ ವರ್ಗಾವಣೆಗಾಗಿ ಕಾಯುತ್ತಿದ್ದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಪೈಕಿ 06 ಬೋಧಕ ಸಿಬ್ಬಂದಿಗಳು ಮತ್ತು 81 ಬೋಧಕೇತರ ಸಿಬ್ಬಂದಿವರ್ಗದವರು ಸೇರಿದಂತೆ ಒಟ್ಟು 87 ಸಿಬ್ಬಂದಿ ವರ್ಗದವರಿಗೆ ವರ್ಗಾವಣೆ ಸಂಬಂಧ ನಿರಾಕ್ಷೇಪಣಾ ಪತ್ರವನ್ನು ನೀಡುವುದರ ಬಗ್ಗೆ ಹಾಗೂ 01 ಬೋಧಕ ಸಿಬ್ಬಂದಿ ಮತ್ತು 02 ಬೋಧಕೇತರ ಸಿಬ್ಬಂದಿವರ್ಗದವರು ಅನ್ಯ ವೈದ್ಯಕೀಯ ಸಂಸ್ಥೆಯಿಂದ ಹಿಮ್ಸ್ ಸಂಸ್ಥೆಗೆ ವರ್ಗಾವಣೆ ಹೊಂದುವುದರ ಬಗ್ಗೆ ನಿರಾಕ್ಷೇಪಣಾ ಪತ್ರ ನೀಡುವಂತೆ ಕೋರಿರುವ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. |

| ಕ್ರಮ ಸಂಖ್ಯೆ | ಹುದ್ದೆ | ನಿರಾಕ್ಷೇಪಣಾ ಪತ್ರ ಕೋರಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸಂಖ್ಯೆ |
|---|---|---|
| | **ಬೋಧಕರು** | |
| 1 | ಪ್ರಾಧ್ಯಾಪಕರು | 01 |
| 2 | ಸಹ ಪ್ರಾಧ್ಯಾಪಕರು | 03 |
| 3 | ಸಹಾಯಕ ಪ್ರಾಧ್ಯಾಪಕರು | 01 |
| 4 | ತುರ್ತು ಚಿಕಿತ್ಸಾ ವೈದ್ಯಾಧಿಕಾರಿ | 01 |

**ನಿರ್ದೇಶಕರು / ಪ್ರಾಂಶುಪಾಲರು**
**ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ**
**ಹಾಸನ**

| | | |
|---|---|---|
| | ಒಟ್ಟು | **06** |
| | **ಬೋಧಕೇತರ ಸಿಬ್ಬಂದಿಗಳು** | |
| 1 | ಶುಶ್ರೂಷಕ ಅಧಿಕಾರಿ | 52 |
| 2 | ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ | 09 |
| 3 | ಓ.ಟಿ. ತಂತ್ರಜ್ಞರು | 01 |
| 4 | ಡಯಾಲಿಸಿಸ್ ತಂತ್ರಜ್ಞರು | 01 |
| 5 | ಕ್ಷ–ಕಿರಣ ತಂತ್ರಜ್ಞರು | 02 |
| 6 | ಆಡಿಯೋ ಮೆಟ್ರಿಕ್ ಟೆಕ್ನಿಷಿಯನ್ | 01 |
| 7 | ಶೀಘ್ರಲಿಪಿಗಾರರು | 03 |
| 8 | ಪ್ರಥಮ ದರ್ಜೆ ಸಹಾಯಕರು | 04 |
| 9 | ದ್ವಿತೀಯ ದರ್ಜೆ ಸಹಾಯಕರು | 04 |
| 10 | ವರ್ಕ್ ಶಾಪ್ ವರ್ಕರ್ | 01 |
| 11 | ಲ್ಯಾಬ್ ಅಸಿಸ್ಟೆಂಟ್ /ಅಟೆಂಡರ್ | 03 |
| | **ಒಟ್ಟು** | **81** |
| | | |

**<u>ತೀರ್ಮಾನ:</u>**

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ಹಿಮ್ಸ್ ಸಂಸ್ಥೆಗೆ ಸುಮಾರು 10 ವರ್ಷಗಳ ಹಿಂದೆ ನೇಮಕವಾದ ಸಿಬ್ಬಂದಿಗಳಿಗೆ ವರ್ಗಾವಣೆ ನೀಡದಿರುವ ಹಿನ್ನೆಲೆಯಲ್ಲಿ ಸದರಿ ನೌಕರರುಗಳ ಕೌಟಂಬಿಕ ಹಿನ್ನೆಲೆಯಲ್ಲಿ ಸಲ್ಲಿಸಿರುವ ಮನವಿ ಪತ್ರಗಳ ಬಗ್ಗೆ ಸಭೆಯಲ್ಲಿ ಪರಿಶೀಲಿಸಲಾಯಿತು. ಮನವಿ ಸಲ್ಲಿಸಿರುವ 81 ಸಿ ಮತ್ತು ಡಿ ವರ್ಗದ ಸಿಬ್ಬಂದಿಗಳ ವರ್ಗಾವಣೆಯ ಮನವಿಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ನಿರಾಕ್ಷೇಪಣಾ ಪತ್ರವನ್ನು ನೀಡುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಸಂಸ್ಥೆಯ ಸುಸೂತ್ರ ಕಾರ್ಯನಿರ್ವಹಣೆಗೆ ಕಷ್ಟಕರವಾಗದಂತೆ, ವರ್ಗಾವಣೆಯಿಂದ ಖಾಲಿಯಾಗುವ ಸಿ ಮತ್ತು ಡಿ ದರ್ಜೆಯ ಹುದ್ದೆಗಳನ್ನು ತಕ್ಷಣವೇ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು.

ಮುಂದುವರೆದು ವರ್ಗಾವಣೆಯಿಂದ ಖಾಲಿಯಾಗುವ ಹಾಗೂ ಪ್ರಸ್ತುತ ಖಾಲಿ ಇರುವ ಶುಶ್ರೂಷಾಧಿಕಾರಿಗಳ ಹುದ್ದೆಗಳ ವಿವರವನ್ನು ಆಯಾ ಸಂಸ್ಥೆಗಳಿಂದ ಪಡೆದು ಕ್ರೂಢೀಕರಿಸಿ ಕೆ.ಇ.ಎ. ಮುಖಾಂತರ ಶುಶ್ರೂಷಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದೆಂದು ಸರ್ವಾನುಮತದಿಂದ ತೀರ್ಮಾನಿಸಿ ಖಾಲಿ ಇರುವ ಶುಶ್ರೂಷಾಧಿಕಾರಿಗಳ ವಿವರವನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು.



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | |
|---|---|---|
| 06 | ಸ್ವಾಯತ್ತ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ನೌಕರರ ವೈದ್ಯಕೀಯ ವೆಚ್ಚ ಮರುಪಾವತಿಸುವ ಕುರಿತು. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರಿಂದ ಬಂದಿರುವ ಪತ್ರದ ಬಗ್ಗೆ. | ಸರ್ಕಾರದ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ.<br><br>"ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು" |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಗೂ
ಸದಸ್ಯ ಕಾರ್ಯದರ್ಶಿ,
ಹಿಮ್ಸ್, ಆಡಳಿತ ಮಂಡಳಿ,
ಹಾಸನ.

ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರು,
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಕರ್ನಾಟಕ ಸರ್ಕಾರ,
ಹಾಗೂ
ಸದಸ್ಯರು, ಹಿಮ್ಸ್ ಆಡಳಿತ ಮಂಡಳಿ
ಹಾಸನ.

Director of Medical Education
Bengaluru.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ವೈದ್ಯಕೀಯ ಶಿಕ್ಷಣ ಇಲಾಖೆ,
ಕರ್ನಾಟಕ ಸರ್ಕಾರ
ಹಾಗೂ
ಉಪಾಧ್ಯಕ್ಷರು, ಹಿಮ್ಸ್, ಆಡಳಿತ ಮಂಡಳಿ,
ಹಾಸನ.

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ
ಹಾಗೂ
ಅಧ್ಯಕ್ಷರು, ಹಿಮ್ಸ್, ಆಡಳಿತ ಮಂಡಳಿ,
ಹಾಸನ.